| ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, | | | | | | | | |
|---|---|---|---|---|---|---|---|---|
| ೨೦೨೪-೨೫ ನೇ ಸಾಲಿನ ಸಂಕಲನಾತ್ಮಕ ಮೌಲ್ಯಮಾಪನ – ೧ | | | | | | | | |
| ಹೆಸರು | | | | ವಿಷಯ | ಕನ್ನಡ | ದಿನಾಂಕ | | |
| STS No. | | ಸಮಯ | ೯೦ ನಿ | ತರಗತಿ | ೮ | ಅಂಕಗಳು | ೪೦ | |
| *ಸೂಚನೆ: ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಕ್ರಮ ಸಂಖ್ಯೆ ಹಾಕಿ ಉತ್ತರ ಬರೆಯಿರಿ. ಅಕ್ಷರಗಳನ್ನು ತಪ್ಪಿಲ್ಲದಂತೆ ಸ್ಪಷ್ಟವಾಗಿ ಬರೆಯಿರಿ.* | | | | | | | | |

**I. ಈ ಕೆಳಗಿನ ಪ್ರಶ್ನೆಗಳಿಗೆ ಹೊಂದಿಸಿ ಬರೆಯಿರಿ** ೬x೧=೬

| | |
|---|---|
| ೧) ಸಾರ್ಥಕ ಬದುಕಿನ ಸಾಧಕ | ಅ. ಕೆ.ಎಸ್. ನರಸಿಂಹಸ್ವಾಮಿ |
| ೨) ಅವನು, ಅದು | ಆ. ಡಿ.ವಿ.ಜಿ. |
| ೩) ಅಸ್ತ್ರ | ಇ. ಎತ್ತಾಗದೇ? |
| ೪) ಭಾರತೀಯತೆ | ಈ. ಅನ್ವರ್ಥಕ ನಾಮಪದ |
| ೫) ಎಳೆಗರು | ಉ. ಆಯುಧ |
| ೬) ಕಿವುಡ | ಊ. ಸರ್ವನಾಮಗಳು |

**II. ಈ ಕೆಳಗಿನ ಪ್ರಶ್ನೆಗಳಿಗೆ ಅವರಣದಲ್ಲಿನ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ** ೮x೧=೮

| | |
|---|---|
| ೭) ನಾನು ಹಣ್ಣು-ಹಂಪಲು ತಿನ್ನುತ್ತೇನೆ. | (ಈ ವಾಕ್ಯದಲ್ಲಿನ ಜೋಡುನುಡಿ ಪದವನ್ನು ತಿಳಿಸಿ.) |
| ೮) 'ದೇವಾಲಯ' , 'ನೀರಿಲ್ಲ' | (ಈ ಪದಗಳನ್ನು ಬಿಡಿಸಿ ಬರೆಯಿರಿ) |
| ೯) ಅವನು ನಮ್ಮ ಶಾಲೆಯ ಬಿಸಿಊಟ ಸವಿಯುತ್ತಾನೆ | (ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ ಯಾವುದು?) |
| ೧೦) ಶಾಲೆ, ಅಪ್ಪ, ಗೆಳೆಯ | (ಈ ಪದಗಳ ಬಹುವಚನ ರೂಪವೇನು?) |
| ೧೧) ಅತ್ತೆ, ಚಿಕ್ಕಪ್ಪ, ಕತೆಗಾರ, ನಟಿ | (ಈ ಪದಗಳ ಅನ್ಯಲಿಂಗ ಪದಗಳನ್ನು ಬರೆಯಿರಿ) |
| ೧೨) "ವರ್ಷ" | (ಈ ಪದದ ತದ್ಭವ ರೂಪ ತಿಳಿಸಿ) |
| ೧೩) "ತಾಯಿ" | (ಈ ಪದಕ್ಕೆ ಕನಿಷ್ಟ 2 ಸಮನಾರ್ಥಕ ಪದಗಳನ್ನು ಬರೆಯಿರಿ.) |
| ೧೪) "ಸುಖ" | (ಈ ಪದದ ವಿರುದ್ಧಾರ್ಥಕ ಪದವನ್ನು ಬರೆಯಿರಿ) |

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.** ೫x೨=೧೦

೧೫) ರಾಜನಾದವನ ಕರ್ತವ್ಯವೇನು? ಆಲದಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?

೧೬) ಪುರಂದರದಾಸರ ಅಂಕಿತ ಯಾವುದು? ಗೀತೆಯನ್ನು ಓದಿದ ಫಲ ಯಾವಾಗ ದೊರೆಯುತ್ತದೆ?

೧೭) ನಮ್ಮನ್ನು ಆಳುವವರು ಯಾರು? ಲತೆ ಏನನ್ನು ನೀಡುತ್ತದೆ?

೧೮) ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು? ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ಯಾರು?

೧೯) ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು? ಭಾರತದಿಂದ ಹೊರಗೆ ಕಾಲಿಟ್ಟರೆ ಎಲ್ಲವೂ ಎಂಥಹ ನಾಡುಗಳು?

**IV. ಈ ಕೆಳಗಿನ ವಾಕ್ಯಗಳನ್ನು ಸಂದರ್ಭದೊಡನೆ ವಿವರಿಸಿರಿ.** ೨x೨=೪

೨೦) "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

೨೧) "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"

**V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.** ೩x೪=೧೨

೨೨) ಈ ಕೆಳಗಿನ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ

ಮಾಲೀಕ, ಗಾಂಧೀಜಿ, ಪುಣ್ಯಾತ್ಮ, ಮುದೇನೂರು.

೨೩) ಈ ಪದ್ಯವನ್ನು ಪೂರ್ಣಗೊಳಿಸಿ: :

ಜೈನರಾದ ಪೂಜ್ಯಪಾದ ............................................. ವಿದ್ಯಾರಣ್ಯರ.

೨೪) ಚಿಕ್ಕ ಪ್ರಬಂಧವನ್ನು ಬರೆಯಿರಿ : ವಿಷಯ : ನಮ್ಮ ಭಾರತ"

# ಮಾದರಿ ಉತ್ತರಗಳು

I.

೧. ಡಿ.ವಿ.ಜಿ.

೨. ಸರ್ವನಾಮಗಳು

೩. ಆಯುಧ

೪. ಕೆ. ಎಸ್. ನರಸಿಂಹ ಸ್ವಾಮಿ

೫. ಎತ್ತಾಗದೇ?

೬. ಅನ್ವರ್ಥಕ ನಾಮಪದ

II.

೭. ಹಣ್ಣು-ಹಂಪಲು

೮. ದೇವ + ಆಲಯ, ನೀರು+ ಇಲ್ಲ

೯. ಪ್ರಥಮ ವಿಭಕ್ತಿ ಪ್ರತ್ಯಯ : ಉ.

೧೦. ಶಾಲೆಗಳು, ಅಪ್ಪಂದಿರು, ಗೆಳೆಯರು

೧೧. ಮಾವ, ಚಿಕ್ಕಮ್ಮ, ಕತೆಗಾರ್ತಿ, ನಟ

೧೨. ವರುಷ

೧೩. ತಾಯಿ : ಮಾತೆ, ಅಮ್ಮ, ಅವ್ವ.

೧೪. ದುಃಖ

III.

೧೫. ಪ್ರಜೆಗಳನ್ನು ಪಾಲಿಸುವುದು ರಾಜನಾದವನ ಕರ್ತವ್ಯವಾಗಿದೆ, ಆಲದ ಮರದ ಹೆಮ್ಮರವಾಗುತ್ತದೆ

೧೬. ಪುರಂದರ ವಿಠಲ. ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಂಡಾಗ ಗೀತೆಯ ಓದಿದ ಫಲ ದೊರೆಯುತ್ತದೆ.

೧೭. ಕನ್ನಡಾಂಬೆ. ಲತೆ ಪತ್ರ ಪುಷ್ಪಗಳನ್ನು ನೀಡುತ್ತದೆ.

೧೮. ರಾಹುಲ ತಂದೆ ಕರೆತರಲು ಹೋದನು. ರಾಜನಿಗೆ ಕನಸಿನ ವಿಚಾರ ತಿಳಿಸಿದವರು ಅಂಬಿಕೆ.

೧೯. ಕೋಲಾ ಸಿಗುತ್ತದೆ. ನೀರು ಕೊಡದ ನಾಡುಗಳು.

IV.

೨೦. ಆಯ್ಕೆ: ಲಕ್ಷ್ಮೀನಾರಾಯಣಭಟ್ಟ – 'ಸಾರ್ಥಕ ಬದುಕಿನ ಸಾಧಕ'.

ಸಂದರ್ಭ: ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಆಗ ಡಿವಿಜಿ ಅವರು ಶ್ರೀಮತಿಯವರನ್ನು ಹೀಗೆ ಪ್ರಶ್ನಿಸುತ್ತಾರೆ.

ಸ್ವಾರಸ್ಯ: ಡಿವಿಜಿಯವರು ನಿಜ ಸಂಗತಿ ತಿಳಿಯದೆ; ತಮ್ಮ ಹೆಂಡತಿ ಬಂಧುಗಳ ಮನೆಗೆ ಹೋಗುವುದಿಲ್ಲವೇ ಎಂದು ಪ್ರಶ್ನಿಸುವುದು ಇಲ್ಲಿನ ಸ್ವಾರಸ್ಯವಾಗಿದೆ.

೨೧. ಆಯ್ಕೆ: ಬಾಗಲೋಡಿ ದೇವರಾಯ – ಮಗ್ಗದ ಸಾಹೇಬ.

ಸಂದರ್ಭ: ಕರೀಮನು ಶಂಕರಪ್ಪ ಮಾಸ್ತರರ ಬಳಿ ಹೋಗಿ ತನ್ನ ತಂದೆಯೊಡನೆ ಸಂಧಾನ ಮಾಡಿಸಿರಿ ಎಂದು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಇಲ್ಲಿ ಕರೀಮನ ಸಾಧನೆ, ತಂದೆ-ತಾಯಿಯ ಮೇಲೆ ಇಟ್ಟದ್ದ ಪ್ರೀತಿ, ಮುಖ್ಯೋಪಾಧ್ಯಾಯರಲ್ಲಿ ಆತನು ವಿನಂತಿಸಿಕೊಳ್ಳುವ ರೀತಿ ಈ ಮಾತಿನಲ್ಲಿ ಸ್ವಾರಸ್ಯವಾಗಿ ಮೂಡಿಬಂದಿದೆ.

V.

೨೨. ಮ್+ಆ, ಲ್+ಈ, ಕ್+ಅ. ಗ್+ಆಂ, ಧ್+ಈ, ಜ್+ಇ. ಪ್+ಉ, ಣ್+ಯ್+ಆ, ತ್+ಮ್+ಅ. ಮ್+ಉ, ದ್+ಏ,ನ್+ಊ,ರ್+ಉ

೨೩. ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ, ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,<br>
ಶರ್ವ ಪಂಪ ರನ್ನರ, ಲಕ್ಷ್ಮೀಪತಿ ಜನ್ನರ, ಷಡಕ್ಷರಿ ಮುದ್ದಣ್ಣರ,<br>
ಪುರಂದರ ವರೇಣ್ಯರ, ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

೨೪. ಐಚ್ಛಿಕ ( ನಮ್ಮ ಭಾರತದ ಬಗ್ಗೆ ಪ್ರಬಂಧ ಬರೆಯುವರು) : ಪೀಠಿಕೆ, ವಿಷಯ ನಿರೂಪಣೆ, ಉಪಸಂಹಾರ.